ಜೊಲ್ಲೆ ಗ್ರುಪ್

ವಾರ್ತಾ ಪತ್ರ

(ಖಾಸಗಿ ಸುತ್ತೋಲೆ ಸಲುವಾಗಿ ಮಾತ್ರ)

ಅಕ್ಟೋಬರ 2025–ಸಂಪುಟ–9 ಸಂಚಿಕೆ–10


# ದರ್ಪಣ




ಹೆಮ್ಮೆಯ ಪ್ರಧಾನಮಂತ್ರಿಗಳಾದ ಸನ್ಮಾನ್ಯ ಶ್ರೀ ನರೇಂದ್ರ ಮೋದಿ ಯವರ ಜನ್ಮದಿನ ನಿಮಿತ್ತ 'ಏಕ್ ಪೆಡ್ ಮಾ ಕೆ ನಾಮ್' (ತಾಯಿಗಾಗಿ ಒಂದು ಗಿಡ) ಜೊಲ್ಲೆ ಕುಟುಂಬ ಸದಸ್ಯರು ಹಾಗೂ ಪಕ್ಷದ ಕಾರ್ಯಕರ್ತರರೊಂದಿಗೆ ಸಸಿ ನೆಡುತ್ತಿರುವ ದೃಶ್ಯ.


ಶ್ರೀ ಬೀರೇಶ್ವರ ಕೋ-ಆಪ್. ಕ್ರೆಡಿಟ್ ಸೊಸಾಯಟಿ ಲಿ., ಯಕ್ಸಂಬಾ (ಮಲ್ಟಿ-ಸ್ಟೇಟ್)

ಕ್ರಿಯಾತ್ಮಕ ಹಾಗೂ ಪ್ರಗತಿಶೀಲ...



ಸಪ್ಟಂಬರ್ 30 2025ರ ಆರ್ಥಿಕ ಸ್ಥಿತಿ

ಶಾಖೆಗಳು 228 ಕರ್ನಾಟಕ ಮಹಾರಾಷ್ಟ್ರ ಮತ್ತು ಗೋವಾ ರಾಜ್ಯಾದ್ಯಂತ

ಠೇವು 4610+ ಕೋಟಿ

ಸಾಲ 3553+ ಕೋಟಿ

ಸದಸ್ಯರು 4.24+ ಲಕ್ಷ

ಗುಂತಾವಣೆ 1142+ ಕೋಟಿ

ಲಾಭ 2024-25 45+ ಕೋಟಿ


### ಜೊಲ್ಲೆ ಎಜ್ಯುಕೇಶನ್ ಸೊಸೈಟಿಯ ವಿವಿಧ ಅಂಗ ಸಂಸ್ಥೆಗಳ ಸಿಬ್ಬಂದಿ ವರ್ಗಕ್ಕೆ

## ವೃತ್ತಿ ಬೆಳವಣಿಗೆಯ ಕಾರ್ಯಾಗಾರ

ಯಕ್ಸಂಬಾ ಪಟ್ಟಣದ ಜೊಲ್ಲೆ ಎಜ್ಯೂಕೇಶನ್ ಸೊಸಾಯಟಿಯ ವಿವಿಧ ಅಂಗ ಸಂಸ್ಥೆಗಳ ಸಿಬ್ಬಂದಿ ವರ್ಗಕ್ಕೆ ವೃತ್ತಿ ಬೆಳವಣಿಗೆಯ ಒಟ್ಟು 2 ದಿನಗಳ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಕಾರ್ಯಾಗಾರದ ಉದ್ಘಾಟಣಾ ಸಮಾರಂಭದ ಅಧ್ಯಕ್ಷ ಸ್ಥಾನವನ್ನು ವಹಿಸಿದ ಶ್ರೀ ಜ್ಯೋತಿಪ್ರಸಾದ ಜೊಲ್ಲೆ ಅಧ್ಯಕ್ಷರು ಆಶಾಜ್ಯೋತಿ ವಿಶೇಷ ಮಕ್ಕಳ ವಸತಿ ಶಾಲೆ, ಯಕ್ಸಂಬಾ ದೀಪ ಪ್ರಜ್ವಲನೆಯ ಮೂಲಕ ಚಾಲನೆ ನೀಡಿದರು. ಕಾರ್ಯಾಗಾರದ ನೇತೃತ್ವ ವಹಿಸಿದ ಜೊಲ್ಲೆ ಗ್ರೂಪ್ ಉಪಾಧ್ಯಕ್ಷರಾದ ಶ್ರೀ ಬಸವಪ್ರಸಾದ ಜೊಲ್ಲೆ ಮಾತನಾಡಿ, ಪ್ರಸ್ತುತ ದಿನಮಾನಗಳಲ್ಲಿ ಶಿಕ್ಷಕರ ಕಾರ್ಯಕ್ಕೆ ಸಮಾನವಾದ ಹಾಗೂ ಮೀರಿಸುವ ಯಾವುದೇ ತಂತ್ರಜ್ಞಾನ ಇಲ್ಲ, ಆ ಕಾರಣದಿಂದ ಇಂತಹ ವೃತ್ತಿ ಬೆಳವಣಿಗೆಯ ತರಬೇತಿ ಕಾರ್ಯಾಗಾರಗಳನ್ನು ಶಿಕ್ಷಕರಿಗಾಗಿ ಆಯೋಜಿಸಿ ಅವರ ಜ್ಞಾನ, ಕೌಶಲ್ಯ ಮತ್ತು ಪರಿಣಾಮಕಾರಿ ಕಲಿಕಾ ಮತ್ತು ಬೋಧನಾ ವಾತಾವರಣವನ್ನು ನಿರ್ಮಾಣ ಮಾಡಲು ಆಯೋಜನೆ ಮಾಡುವುದು ನಮ್ಮ ಆದ್ಯ ಕರ್ತವ್ಯ ಎಂದರು. ಶಿಕ್ಷಕ ಸಮೂಹಕ್ಕೆ ಮಗು ಕೇಂದ್ರಿತ ಶಿಕ್ಷಣವನ್ನು ಶಾಲೆಯಲ್ಲಿ ನೀಡಲು ಕರೆ ನೀಡಿದರು.

ಸಂಪನ್ಮೂಲ ವ್ಯಕ್ತಿಗಳಾಗಿ ಡಾ.ನಾಗರಾಜ ಕಾಳೆ ನಿವೃತ್ತ ಪ್ರಾಧ್ಯಾಪಕರು ಡಯಟ್ ಶಿಕ್ಷಣ ಮಹಾವಿದ್ಯಾಲಯ, ಬೆಳಗಾವಿ ಹಾಗೂ ಡಾ.ಮಹೇಶ ಪ್ರಾಚಾರ್ಯರು ಟ್ರಂಪ್ ಸಿ.ಬಿ.ಎಸ್.ಇ. ಸ್ಕೂಲ್, ಬೆಂಗಳೂರು ಇವರು ಆಗಮಿಸಿ ಜೊಲ್ಲೆ ದಂಪತಿಗಳು ಗ್ರಾಮೀಣ ಮಟ್ಟದಲ್ಲಿ ಇಂತಹ ಸಂಸ್ಥೆಯನ್ನು ಹುಟ್ಟುಹಾಕಿ ಪಟ್ಟಣಾಧಾರಿತ ಶಿಕ್ಷಣವನ್ನು ಕೊಡುತ್ತಿರುವುದು ಅತಿ ಹೆಮ್ಮೆಯ ವಿಷಯು ಎಂದು ಸಂಸ್ಥೆಯುನ್ನು ಶ್ಲಾಘಿಸಿ ಇಂತಹ ತರಬೇತಿ ಕಾರ್ಯಾಗಾರಗಳನ್ನು ಆಯೋಜನೆ ಮಾಡುತ್ತಿರುವುದಕ್ಕೆ ಸಂಸ್ಥೆಯ ದೂರದೃಷ್ಟಿಯೇ ಕಾರಣ ಎಂದರು. ಕಾರ್ಯಾಗಾರದ ಅವಧಿಯಲ್ಲಿ ಶಿಕ್ಷಕರಿಗೆ ಪರಿಣಾಮಕಾರಿ ಬೋಧನೆಗೆ ಎಂತಹ ಕಲಿಕಾ ವಾತಾವರಣ ಅವಶ್ಯ, ವರ್ಗ ಕೋಣೆಯ ನಿರ್ವಹಣೆ, ಸಂಹವನ ಕೌಶಲ್ಯ, ಮಗು ಕೇಂದ್ರಿತ ಶಿಕ್ಷಣದ ಸ್ವರೂಪ, ಬೋಧನಾ ಕಲಿಕಾ ವಾತಾವರಣದಲ್ಲಿ ಶಿಕ್ಷಕರ ಮತ್ತು ಮಕ್ಕಳ ಸಂಬಂಧ ಹೇಗಿರಬೇಕು ಎಂಬ ಅಂಶಗಳ ಮೇಲೆ ವಿವಿಧ ಚಟುವಟಿಕೆಗಳನ್ನು ಮಾಡುವುದರ ಮೂಲಕ ತರಬೇತಿ ಕಾರ್ಯಾಗಾರದಲ್ಲಿ ಉಪನ್ಯಾಸ ನೀಡಿದರು.

ಕಾರ್ಯಕ್ರಮದ ಕುರಿತು ಸಂಸ್ಥೆಯ ಸಂಯೋಜಕರಾದ ಎಮ್ ಎಮ್ ಪಾಟೀಲ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಪ್ರಾಚಾರ್ಯರಾದ ಡಾ. ಶ್ರೀ ರವಿ ಕುರಬೇಟ, ಉರ್ಮಿಳಾ ಚೌಗಲಾ, ನಂದಾ ಚುನಮುರಿ, ಗುರುನಾಥ ಸದಲಗೆ, ಸಿ.ಪಿ.ಬನ್ನಟ್ಟಿ, ಮುಖ್ಯೋಪಾಧ್ಯಾಯರಾದ ವಿರೂಪಾಕ್ಷಿ ಭಿವಸೆ, ವಿಜಯ ನಾಯಿಕ ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ವರ್ಷಾ ಉಪಾಧ್ಯೆ, ಪ್ರೀಯಂಕಾ ದೇಸಾಯಿ, ಪೂನಮ ಪರೀಟ ನಿರೂಪಿಸಿ, ಸ್ವಾಗತಿಸಿ, ವಂದಿಸಿದರು.







# ಅಂತರರಾಷ್ಟ್ರೀಯ ಶಾಂತಿ ದಿನ 2025

ಪ್ರತಿ ವರ್ಷ ಸೆಪ್ಟೆಂಬರ್ 21 ರಂದು ಪ್ರಪಂಚದಾದ್ಯಂತ ಅಂತರರಾಷ್ಟ್ರೀಯ ಶಾಂತಿ ದಿನವನ್ನು ಆಚರಿಸಲಾಗುತ್ತದೆ. ಎಲ್ಲಾ ದೇಶಗಳಲ್ಲಿ ಶಾಂತಿಯನ್ನು ಉತ್ತೇಜಿಸಲು, ಸಂಘರ್ಷಗಳನ್ನು ಕೊನೆಗೊಳಿಸಲು ಮತ್ತು ಸಾಮರಸ್ಯವನ್ನು ತುಂಬಲು ಈ ದಿನವನ್ನು ಆಚರಿಸಲಾಗುತ್ತದೆ.

2025 ರ ಅಂತರರಾಷ್ಟ್ರೀಯ ಶಾಂತಿ ದಿನದ ಥೀಮ್ "ಶಾಂತಿಯುತ ಜಗತ್ತಿಗೆ ಈಗಲೇ ಕಾರ್ಯನಿರ್ವಹಿಸಿ". ಜಾಗತಿಕ ಶಾಂತಿಗೆ ಬೆದರಿಕೆ ಹಾಕುವ ಸವಾಲುಗಳನ್ನು ಎದುರಿಸಲು ಸಾಮೂಹಿಕ ಕ್ರಮದ ತುರ್ತು ಅಗತ್ಯವನ್ನು ಈ ಥೀಮ್ ಎತ್ತಿ ತೋರಿಸುತ್ತದೆ. ಶಾಂತಿ ನೆಲೆಸುವ ಜಗತ್ತನ್ನು ಸೃಷ್ಟಿಸುವಲ್ಲಿ ವ್ಯಕ್ತಿಗಳು, ಸಮುದಾಯಗಳು ಮತ್ತು ರಾಷ್ಟ್ರಗಳ ಪಾತ್ರದ ಬಗ್ಗೆಯೂ ಈ ದಿನ ಮಾತನಾಡುತ್ತದೆ.

### ಅಂತರರಾಷ್ಟ್ರೀಯ ಶಾಂತಿ ದಿನ 2025

2025 ರ ಅಂತರರಾಷ್ಟ್ರೀಯ ಶಾಂತಿ ದಿನವು ಸೆಪ್ಟೆಂಬರ್ 21 ಈ ದಿನದಂದು ಪ್ರಪಂಚದಾದ್ಯಂತ ವಿವಿಧ ಕಾರ್ಯಕ್ರಮಗಳು ಮತ್ತು ಅಭಿವೃದ್ಧಿ ಮತ್ತು ಶಾಂತಿಗಾಗಿ ಅಂತರರಾಷ್ಟ್ರೀಯ ಕ್ರೀಡಾ ದಿನವನ್ನು ಆಯೋಜಿಸಲಾಗಿದೆ.

### ಅಂತರರಾಷ್ಟ್ರೀಯ ಶಾಂತಿ ದಿನದ ಇತಿಹಾಸ ಮತ್ತು ಹಿನ್ನೆಲೆ

ಅಂತರರಾಷ್ಟ್ರೀಯ ಶಾಂತಿ ದಿನವು 1981 ರ ಹಿಂದಿನದು, ಆಗ ವಿಶ್ವಸಂಸ್ಥೆಯು ಈ ದಿನದ ಗುರುತನ್ನು ಘೋಷಿಸಿತು. ಮೊದಲ ಆಚರಣೆ 1982 ರಲ್ಲಿ ನಡೆಯಿತು, ಮತ್ತು ಇದು ಶೀಘ್ರವಾಗಿ ಜಾಗತಿಕ ಪ್ರತಿಬಿಂಬದ ದಿನವಾಯಿತು. ರಾಷ್ಟ್ರಗಳ ಒಳಗೆ ಮತ್ತು ಅವುಗಳ ನಡುವೆ ಶಾಂತಿಯನ್ನು ಬಲಪಡಿಸುವುದು ಇದರ ಮೂಲ ಗುರಿಯಾಗಿತ್ತು.

ಇತ್ತೀಚಿನ ವರ್ಷಗಳಲ್ಲಿ, ಈ ಆಚರಣೆಯು ಸಾಂಸ್ಕೃತಿಕ ತಿಳುವಳಿಕೆ ಮತ್ತು ಸಹಕಾರವನ್ನು ಉತ್ತೇಜಿಸಲು ವಿಶ್ವಾದ್ಯಂತ ವೇದಿಕೆಯಾಗಿ ಮಾರ್ಪಟ್ಟಿದೆ. ಈ ದಿನವು ಶಾಂತಿ ಮತ್ತು ಸಂಘರ್ಷ ಪರಿಹಾರಕ್ಕೆ ವಿಶ್ವಸಂಸ್ಥೆಯ ಬದ್ಧತೆಯನ್ನು ಪ್ರತಿನಿಧಿಸುವುದಲ್ಲದೆ, ಸುಸ್ಥಿರ ಅಭಿವೃದ್ಧಿ ಗುರಿಗಳೊಂದಿಗೆ ಸಂಪರ್ಕ ಸಾಧಿಸುತ್ತದೆ. ಈ SDG ಗಳು ಶಾಂತಿ, ನ್ಯಾಯ ಮತ್ತು ಬಲವಾದ ಸಂಸ್ಥೆಗಳನ್ನು ಮಾನವ ಪ್ರಗತಿಯ ಪ್ರಮುಖ ಅಂಶಗಳಾಗಿ ಒಳಗೊಂಡಿವೆ.

### ಅಂತರರಾಷ್ಟ್ರೀಯ ಶಾಂತಿ ದಿನ 2025 ರ ಥೀಮ್

2025 ರ ಅಂತರರಾಷ್ಟ್ರೀಯ ಶಾಂತಿ ದಿನದ ಥೀಮ್ "ಶಾಂತಿಯುತ ಜಗತ್ತಿಗೆ ಈಗಲೇ ಕಾರ್ಯನಿರ್ವಹಿಸಿ". ಈ ಥೀಮ್ ಜನರು ಶಾಂತಿಯ ಸಂಸ್ಕೃತಿಯನ್ನು ಸೃಷ್ಟಿಸಲು ವಿಳಂಬವಿಲ್ಲದೆ ಕ್ರಮ ಕೈಗೊಳ್ಳುವಂತೆ ಒತ್ತಾಯಿಸುತ್ತದೆ. ಸಂಘರ್ಷಕ್ಕೆ ಕಾರಣವಾಗುವ ಪ್ರಮುಖ ಸಮಸ್ಯೆಗಳನ್ನು ಪರಿಹರಿಸಲು ವ್ಯಕ್ತಿಗಳು ಮತ್ತು ಸರ್ಕಾರಗಳು ಒಟ್ಟಾಗಿ ಕೆಲಸ ಮಾಡಿದರೆ ಮಾತ್ರ ಶಾಶ್ವತ ಶಾಂತಿ ಸಾಧ್ಯ ಎಂದು ಇದು ತೋರಿಸುತ್ತದೆ.

ಜಗತ್ತು ರಾಜಕೀಯ ವಿವಾದಗಳು, ಸಾಮಾಜಿಕ ಅಶಾಂತಿ ಮತ್ತು ಪರಿಸರ ಸವಾಲುಗಳನ್ನು ಎದುರಿಸುತ್ತಿರುವುದರಿಂದ ಈ ವಿಷಯವು ಮುಖ್ಯವಾಗಿದೆ. ನಿರ್ಲಕ್ಷಿಸಿದರೆ, ಈ ಸಮಸ್ಯೆಗಳು ಉಲ್ಬಣಗೊಳ್ಳಬಹುದು. 2025 ರ ವಿಷಯವು ಸಹಕಾರ, ಸಂವಾದ ಮತ್ತು ಪರಸ್ಪರ ಗೌರವದ ಮೂಲಕ ಶಾಂತಿಯನ್ನು ನಿರ್ಮಿಸುವ ತುರ್ತುಸ್ಥಿತಿಯನ್ನು ಎತ್ತಿ ತೋರಿಸುತ್ತದೆ. ಸುರಕ್ಷಿತ ಮತ್ತು ಹೆಚ್ಚು ಸಾಮರಸ್ಯದ ಭವಿಷ್ಯಕ್ಕಾಗಿ ಪ್ರತಿಯೊಬ್ಬರೂ ಕೊಡುಗೆ ನೀಡಲು ಇದು ಒಂದು ಕರೆಯಾಗಿದೆ.

### ಅಂತರರಾಷ್ಟ್ರೀಯ ಶಾಂತಿ ದಿನ 2025 ಕಾರ್ಯಕ್ರಮಗಳು ಮತ್ತು ಆಚರಣೆಗಳು

ಪ್ರತಿ ವರ್ಷ, ಅಂತರರಾಷ್ಟ್ರೀಯ ಶಾಂತಿ ದಿನದ ಕಾರ್ಯಕ್ರಮಗಳು ಜಾಗೃತಿ ಮೂಡಿಸುವುದು ಮತ್ತು ಸಾಂಸ್ಕೃತಿಕ ಸಾಮರಸ್ಯವನ್ನು ಆಚರಿಸುವುದರ ಮೇಲೆ ಕೇಂದ್ರೀಕರಿಸುತ್ತವೆ. ಸಮುದಾಯಗಳು ಮೆರವಣಿಗೆಗಳು, ಸಂವಾದಗಳು ಮತ್ತು ಸಾಂಕೇತಿಕ ಚಟುವಟಿಕೆಗಳಂತಹ ವ್ಯಾಪಕ ಶ್ರೇಣಿಯ ಕಾರ್ಯಕ್ರಮಗಳನ್ನು ಆಯೋಜಿಸುತ್ತವೆ.

# ಓಝೋನ ಪದರಿನ ನಾಶ

ಸಪ್ಟೆಂಬರ 16ರಂದು ವಿಶ್ವ ಓಝೋನ್ ದಿನಾಚರಣೆಯನ್ನು ಆಚರಿಸುತ್ತಾರೆ. ಇದು ಓಝೋನ್ ಕುರಿತು ಒಂದು ಕಿರು ನೋಟ. ಸಂಶೋಧನೆ ಮಾನವ ಜೀವನದಲ್ಲಿ ಮತ್ತು ವಿಕಾಸದಲ್ಲಿ ಅತ್ಯಂತ ಮಹತ್ವದ ಪಾತ್ರವಹಿಸುತ್ತದೆ. ಮನು ಕುಲದ ಅಭಿವೃದ್ಧಿ ಹಾಗೂ ಪ್ರಗತಿಗೆ ಕಾರಣವಾದ ಮತ್ತು ಉಪಯುಕ್ತವಾದ ವಸ್ತುಗಳು ಕೊನೆಗೆ ಪರಿಸರದ ಮೇಲೆ ಹಾಗೂ ಮಾನವನ ಸ್ವಾಸ್ಥ್ಯದ ಮೇಲೆ ಬಹಳ ಹಾನಿಕರ ಉಂಟುಮಾಡುತ್ತಿದೆ. ಇತ್ತೀಚಿಗೆ ಹೆಚ್ಚಾಗಿ ಬಳಸಲಾಗುತ್ತಿರುವ Mobile, Rimote Control, cardless phone ಹೊರಸೂಸುವ ರೇಡಿಯೋ ವಿಕಿರಣತೆಗಳಿಂದ ಮಾನವನಲ್ಲಿ ಬಲಕ್ಷೀಣತೆ, ಸುಸ್ತಾಗುವಿಕೆ, ಮೆದುಳಿನ ಗಡ್ಡೆ, ನಿದ್ರಾಹೀನತೆ, ಏಕಾಗ್ರತೆ ಮುಂತಾದ ಸಮಸ್ಯೆಗಳು ಹೆಚ್ಚಾಗುವುದೆಂದು ವಿಜ್ಞಾನಿಗಳು ಹೇಳಿದ್ದಾರೆ.

ಕೆಲವು ಬಗೆಯ ರಾಸಾಯನಿಕಗಳಿಂದ ಅಂಟಾರ್ಟಿಕದ ಮೇಲೆ ಉಂಟಾಗಿರುವ ಓಝೋನ್ ರಂಧ್ರ ಹಾನಿಕಾರಕ ವಾಸ್ತವಾಂಶ ಇದಕ್ಕೆ ಪ್ರಧಾನ ಕಾರಣವಾಗಿದೆ. ಭೂಮಿಯಿಂದ 20 ರಿಂದ 50km ವ್ಯಾಪ್ತಿಯಲ್ಲಿ ಬೇರೆ ಬೇರೆ ಸಾಂದ್ರತೆ ಇದು ಟ್ರೋಪೋಪಾಸ ಸ್ತರಮಂಡಲದ ನಡುವೆ ಕಂಡುಬರುತ್ತದೆ. ಇದು ಉತ್ತರ ಮತ್ತು ದಕ್ಷಿಣ ಧ್ರುವದಲ್ಲಿ ತೆಳುವಾಗಿದೆ. ಈ ಪದರ ಭೂಮಿಯ ಮೇಲೆ ಹರಡಿದರೆ 3mm ದಪ್ಪದ ಪದರವಾಗುತ್ತದೆ. ಸೂರ್ಯನಿಂದ 280 ರಿಂದ 320nm-$10^{-9}$m ನಡುವಿನ ತರಂಗದೂರ ಅಪಾಯಕಾರಿ ನೇರಳಾತೀತ ಕಿರಣ UV.B ಓಝೋನ್ $O_2$ ಜೊತೆ ಆಮ್ಲಜನಕ ಒಂದು ಸ್ವತಂತ್ರ ಅಣು ಸೇರಿ ಸ್ಟ್ರೋಟಸ್ಪಿಯರ ಪದರ ಸೃಷ್ಟಿಯಾಗುತ್ತದೆ.

### ಓಝೋನ್ ವಿನಾಶಕ್ಕೆ ಕಾರಣ

1) CFC
2) ಮಿಥೈಲ್ ಕ್ಲೋರೈಡ್
3) ಮಿಥೈಲ ಬ್ರೋಮೈಡ
4) ಕಾರ್ಬನ್ ಟೆಟ್ರಾಕ್ಲೋರೈಡ
5) ಹೈಡ್ರೋಕ್ಲೋರೋ ಫ್ಲೋರೋ ಕಾರ್ಬನ್

CFC ಇದು ಕ್ಲೋರೊ ಫ್ಲೋರೋ ಮತ್ತು ಕಾರ್ಬನ್ ಪರಮಾಣುವಿನಿಂದ ರಚಿತವಾಗಿದೆ. ಇದನ್ನು 1928ರಲ್ಲಿ ಜನರಲ್ ಮೊಟಾರ ಕಾರ್ಪೋರೇಷನದವರು ವಾತಾವರಣಕ್ಕೆ ಬಿಡುಗಡೆ ಮಾಡಿದರು. ರೆಫ್ರಿಜರೇಟರ್‌ನಲ್ಲಿ $NH_3$ ಬದಲಾಗಿ CFC ಬಳಸಿದರು. 1973 ರಲ್ಲಿ ಅಮೇರಿಕಾ ವಿಜ್ಞಾನಿಗಳು ಎಲ್ಲರ ಗಮನ ಸೆಳೆದರು ಯುರೋಪ ದೇಶಗಳಲ್ಲಿ CFCನ್ನು ನಿಷೇದಿಸಲಾಯಿತು. 1984ರಲ್ಲಿ ಅಂಟಾರ್ಟಿಕಾ ಒಂದು ಸಣ್ಣ ಪ್ರದೇಶದ ಮೇಲೆ 30% ರಷ್ಟು ಕಡಿಮೆಯಾಗಿದೆ ಎಂದು ತಿಳಿಸಿದರು.

1987ರಲ್ಲಿ ಪ್ರಪಂಚದ 66 ದೇಶಗಳು ಕೆನಡಾದ ಮ್ಯಾಂಟ್ರಿಯೋಲ್‌ನಲ್ಲಿ ಓಜೋನ ರಕ್ಷಿಸುವ ಒಪ್ಪಂದಕ್ಕೆ ಸಹಿ ಹಾಕಿದವು. ಅಗ್ನಿಶಾಮಕದಲ್ಲಿ ಬಳಸುವ ಹಾಲಾನ್‌ಗಳೆಂಬ ರಾಸಾಯನಿಕ ನಿಷೇಧ ಇಲ್ಲಿ ಮುಂದಿನ 15 ವರ್ಷದೊಳಗೆ CFC ಸಂಪೂರ್ಣ ನಿಷೇದಿಸಬೇಕೆಂದು ತಿಳಿಸಿದರು.

CSIR ಪೂಣಾ ಮತ್ತು ಹೈದ್ರಾಬಾದ (Indian Institute of Chemical Technology) CFC ಬದಲಾಗಿ HCFC22 ಮತ್ತು HCFC-134 ಎಂಬ ಎರಡು ಬದಲಿ ವಸ್ತುಗಳನ್ನು ಸೃಷ್ಟಿಸಿದರು ಇದೂಕೂಡ ಸುರಕ್ಷಿತವಲ್ಲ. 1992ರಲ್ಲಿ ಕೋಪನ್ ಹೇಗನನಲ್ಲಿ ನಡೆದ ಮ್ಯಾಂಟ್ರಿಯಲ್ ಒಡಂಬಡಿಕೆ ಚರ್ಚೆಯಲ್ಲಿ HCDC ಹಂತಹಂತವಾಗಿ ನಿಷೇದಿಸಬೇಕೆಂದು ನಿರ್ಣಯಿಸಲಾಯಿತು. ಈಗ ಸದ್ಯ ದಾಖಲೆಗಳ ಪ್ರಕಾರ ಭೂಮಿಯ ಸುತ್ತಮುತ್ತ ಓಝೋನ ಮುಗಿತಾ ಬಂದಿದೆ. ಅಮೇರಿಕಾ, ಯುರೋಪ, ರಷಿಯಾ ಮತ್ತು ನ್ಯುಜಿಲ್ಯಾಂಡ ಈಗಾಗಲೆ ಇದರ ಪರಿಣಾಮ ಅನುಭವಿಸುತ್ತಿವೆ.

### ಓಝೋನ್ ಪರಿಣಾಮ

1) ನಿರೋದಕ ಶಕ್ತಿ ಕಡಿಮೆ
2) ಬೀಜ ಪಳೆಯುಳಿಕೆ ಅಡ್ಡಿ
3) ಇಳಿವರಿ ಪರಿಣಾಮ
4) ತೇಲುವ ಸಸ್ಯಗಳ ಬೆಳವಣಿಗೆ ಕ್ಷಿಣ
5) ಎಲೆ ಸಣ್ಣದಾಗುವುದು, ಕಳೆ ಜಾಸ್ತಿ
6) ಪಾಚಿ ಉತ್ಪನ್ ತಗ್ಗಿಸುತ್ತದೆ.

ಒಟ್ಟಾರೆ ಓಝೋನ್ ಪದರ ಜೀವಸಂಕುಲದ ಕವಚ ಇದ್ದ ಹಾಗೆ ಅದನ್ನು ಉಳಿಸುವ ಪ್ರಯತ್ನ ನಾವೆಲ್ಲರು ಮಾಡಬೇಕಾಗಿದೆ.

ಸಿ. ಆರ್. ಬಸ್ತವಾಡೆ
ಸಹ ಪ್ರಾಧ್ಯಾಪಕರು
ಡಾ॥ ಬಾಬಾಸಾಹೇಬ ಅಂಬೇಡ್ಕರ (ಬಿ.ಎಡ್.)
ಶಿಕ್ಷಣ ಮಹಾವಿದ್ಯಾಲಯ, ನಣದಿ

# ದೇಶದ ಹೆಮ್ಮೆಯ ಮಹಿಳೆ-ಕಿರನ್ ಬೇಡಿ

**ಪರಿಚಯ :**

ಭಾರತದ ಮಹಿಳೆಯರು ಇಂದು ಎಲ್ಲ ಕ್ಷೇತ್ರಗಳಲ್ಲಿ ಯಶಸ್ಸುಗಳಿಸುತ್ತಿದ್ದಾರೆ. ಆದರೆ ಕೆಲ ವರ್ಷಗಳ ಹಿಂದೆ ಪೋಲಿಸ ಇಲಾಖೆಯಲ್ಲಿ ಮಹಿಳೆಯರ ಸ್ಥಾನ ಮಾತ್ರ ಕನಿಷ್ಠವಾಗಿತ್ತು. ಇಂಥ ಸಂದರ್ಭದಲ್ಲಿ ಭಾರತದಲ್ಲಿ ಮೊದಲ ಮಹಿಳಾ IPS ಅಧಿಕಾರಿ ಎಂಬ ಗೌರವವನ್ನು ಗಳಿಸಿದರು. ಡಾ. ಕಿರಣ್ ಬೇಡಿ ಅವರು ಶಿಸ್ತಿನ ಸಮರ್ಥತೆಯ ಹಾಗೂ ಮಾನವೀಯತೆಯ ಪ್ರತಿರೂಪ ಎಂದರೆ ತಪ್ಪಾಗಲಾರದು.

**ಬಾಲ್ಯ ಮತ್ತು ಶಿಕ್ಷಣ :**

ಕಿರಣ್ ಬೇಡಿ ಅವರು 1949ರ ಜೂನ 9ರಂದು ಪಂಜಾಬಿನ ಅಮೃತಸರದಲ್ಲಿ ಜನಿಸಿದರು. ಅವರ ತಂದೆ ಅವರಿಗೆ ಶಿಕ್ಷಣದಲ್ಲಿ ಸಂಪೂರ್ಣ ಸಹಕಾರ ನೀಡಿದರು. ಅವರು ರಾಜಕೀಯ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯೊಂದಿಗೆ ಕಾನೂನು ಮತ್ತು ಸಮಾಜಶಾಸ್ತ್ರದಲ್ಲಿಯೂ ಶಿಕ್ಷಣ ಪಡೆದವರು ಬಾಲ್ಯದಲ್ಲಿಯೇ ಟೆನ್ನಿಸ್ ಕ್ರೀಡೆಯಲ್ಲಿ ರಾಷ್ಟ್ರ ಮಟ್ಟದ ಪ್ರಶಸ್ತಿಗಳನ್ನು ಗಳಿಸಿದ್ದರು.

**IPS ಸೇವೆಗೆ ಪ್ರವೇಶ :**

1972ರಲ್ಲಿ ಕಿರಣ್ ಬೇಡಿ ಅವರು ಭಾರತದ ಮೊದಲ ಮಹಿಳಾ ಐಪಿಎಸ್ ಅಧಿಕಾರಿಯಾಗಿ ಗುರುತಿಸಿಕೊಂಡರು. ಮಹಿಳೆಯರಿಗೂ ಪೋಲೀಸ ಸೇವೆಯಲ್ಲಿ ಸ್ಥಾನವಿದೆ ಎಂಬುದನ್ನು ಅವರು ತಮ್ಮ ಜೀವನದಿಂದ ಸಾಬೀರು ಪಡಿಸಿದರು. ಅವರು ಕಠಿಣ ಶಿಸ್ತಿಗೆ ಹೆಸರಾಗಿದ್ದರು. ಜವಾಬ್ದಾರಿಯಿಂದ ಕೆಲಸ ಮಾಡುವ ಮೂಲಕ ಸಾರ್ವಜನಿಕರ ಸಮಸ್ಯೆಗೆ ಸ್ಪಂದಿಸುತ್ತಿದ್ದರು.

**ತಿಹಾರ್ ಜೈಲು ಸುಧಾರಣಾ ಚಟುವಟಿಕೆಗಳು :**

ಕಿರಣ ಬೇಡಿ ಅವರ ಸೇವೆಯಲ್ಲಿ ಪ್ರಮುಖ ಅಧ್ಯಾಯವೆಂದರೆ ತಿಹಾರ ಜೈಲು ಸುಧಾರಣೆ. ಅವರು ಈ ಜೈಲಿನ ಅಧಿಕಾರಿ ಆಗಿದ್ದಾಗ ಬಂಧಿತರ ಜೀವನವನ್ನು ಬದಲಿಸುವಂತಹ ನಿರ್ಣಯಗಳನ್ನು ತೆಗೆದುಕೊಂಡರು. ಯೋಗ, ಧ್ಯಾನ, ಶಿಕ್ಷಣ ಹಾಗೂ ಉದ್ಯೋಗ ತರಬೇತಿಯ ಮೂಲಕ ಜೈಲು ವ್ಯವಸ್ಥೆಯಲ್ಲಿ ಮಾನವಿಯತೆ ತರಲು ಪ್ರಯತ್ನಿಸಿದರು ಈ ಕೆಲಸಗಳಿಗೆ ಅವರು ಜಾಗತಿಕ ಮಟ್ಟದಲ್ಲಿ ಪ್ರಶಂಸೆ ಗಳಿಸಿದರು.

**ಸಾಮಾಜಿಕ ಸೇವೆ ಮತ್ತು ರಾಜಕೀಯ :**

ಪೋಲೀಸ್ ಸೇವೆಯಿಂದ ನಿವೃತ್ತಿಯಾದ ನಂತರ ಅವರು ಸಾಮಾಜಿಕ ಸೇವೆಯಲ್ಲಿ ತೊಡಗಿದರು. ಅವರು India Vision Foundotion ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಅವರು 2016ರಲ್ಲಿ ಪಾಂಡಿಚೇರಿಯ ಲೆಫ್ಟಿನೆಂಟ ಗವರ್ನರ್ ಆಗಿಯೂ ಸೇವೆ ಸಲ್ಲಿಸಿದರು. ರಾಜಕೀಯವಾಗಿ ಅವರು ಕೆಲ ಕಾಲ ಭಾರತೀಯ ಜನತಾ ಪಾರ್ಟಿ (ಬಿಜೆಪಿ) ಪಕ್ಷದಲ್ಲಿ ಸಹ ಭಾಗಿಯಾಗಿದ್ದರು.

ಪ್ರಶಸ್ತಿ ಮತ್ತು ಗೌರವಗಳು :

ಅವರ ಸೇವೆ ಮತ್ತು ಕೊಡುಗೆಗಳನ್ನು ಗುರುತಿಸಿ ಹಲವಾರು ಪ್ರಶಸ್ತಿಗಳನ್ನು ನೀಡಲಾಗಿದೆ.

* ರೇಮನ್ ಮೆಗ್ಸೆಸೆ ಪ್ರಶಸ್ತಿ (1994)- ಉತ್ತಮ ಶ್ರೇಣಿಯ ಸಾರ್ವಜನಿಕ ಸೇವೆಗಾಗಿ
* ಪದ್ಮ ಪ್ರಶಸ್ತಿ ( ಪ್ರಸ್ತಾವಿತ)
* ಯುನೆಸ್ಕೋ ಪ್ರಶಸ್ತಿ
* ಅಂತರಾಷ್ಟ್ರೀಯ ಮಹಿಳಾ ಪ್ರಶಸ್ತಿ
* ಹಲವಾರು ಶಾಲೆ-ಕಾಲೇಜುಗಳಿಂದ ಗೌರವ ಡಾಕ್ಟರೇಟ ಪದವಿ

**ಪ್ರೇರಣೆಯ ಮೂಲ :**

ಕಿರಣ್ ಬೇಡಿ ಅವರು ಭಾರತೀಯ ಮಹಿಳೆಯರ ಶಕ್ತಿಯ, ಧೈರ್ಯದ ಮತ್ತು ಆತ್ಮವಿಶ್ವಾಸದ ಮಾದರಿಯಾಗಿದ್ದಾರೆ. ಅವರು ತನ್ನ ಬದುಕಿನಲ್ಲಿ ಹಲವಾರು ಅಡೆತಡೆಯನ್ನು ಎದುರಿಸಿದರೂ ಯಾವತ್ತು ಹಿಂತಿರುಗಿಲ್ಲ ಅವರು ಸೇವೆ ಮಾಡೋದು ಧರ್ಮ ಎಂಬ ತತ್ವವನ್ನು ಅನುಸರಿಸುತ್ತಾ ಸಮಾಜಮುಖಿ ಕೆಲಸಗಳನ್ನು ಮುಂದುವರೆಸಿದ್ದಾರೆ. ಅವರ ಜೀವನ ನಮ್ಮರಿಗೂ ಬಹುಮುಖ ಪಾಠಗಳನ್ನು ದೃಡನಿಶ್ಚಯದ ಪ್ರೇರಣೆಯನ್ನು ನೀಡುತ್ತದೆ. ಅವರು ತೋರಿದ ಶ್ರದ್ದೆ ಶಿಸ್ತು ಮತ್ತು ಸಮರ್ಥತನ ನಮ್ಮ ಭಾರತವನ್ನು ಉತ್ತಮ ಸಮಾಜವನ್ನಾಗಿ ರೂಪಿಸಲು ಸಹಕಾರಿಯಾಗಿದೆ.

ಶಿಲ್ಪಾ ಎಸ್. ಉಪಾಧ್ಯೆ
ಸಹ ಪ್ರಾಧ್ಯಾಪಕರು
ಡಾ॥ ಬಾಬಾಸಾಹೇಬ ಅಂಬೇಡ್ಕರ (ಬಿ.ಎಡ್.)
ಶಿಕ್ಷಣ ಮಹಾವಿದ್ಯಾಲಯ, ನಣದಿ

## ಶ್ರೀ ಜ್ಯೋತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ಸಂಘ ನಿ., ಯಕ್ಸಂಬಾ



ಸಪ್ಟಂಬರ್ 30 2025ರ ಆರ್ಥಿಕ ಸ್ಥಿತಿ

| | |
|---|---|
| ಶಾಖೆಗಳು | 81 |
| ಠೇವು | 362+ ಕೋಟಿ |
| ಸಾಲ | 187+ ಕೋಟಿ |
| ಸದಸ್ಯರು | 47+ ಸಾವಿರ |
| ಗುಣಿತಾವನಿಗಳು | 126+ ಕೋಟಿ |
| ಲಾಭ 2024-25 | 01+ ಕೋಟಿ |




ಬಸವಜ್ಯೋತಿ ಕಲಾವಾಣಿಜ್ಯ ಮತ್ತು ವಿಜ್ಞಾನ ಪದವಿ ಕಾಲೇಜು, ಮೌಲಾನಾ ಅಬುಲ್ ಕಲಾಂ ಆಜಾದ್ ಬಿ.ಎಸ್.ಡಬ್ಲ್ಯೂ ಕಾಲೇಜು ಮತ್ತು ಸ್ವಾಮಿ ವಿವೇಕಾನಂದ ಬಿ.ಸಿ.ಎ.ಕಾಲೇಜು ಸಹಯೋಗದಲ್ಲಿ ಹುಬ್ಬಳಿಯ ದೇಶಪಾಂಡೆ ಫೌಂಡೇಶನ್ ಸಹಯೋಗದಲ್ಲಿ ಕೌಶಲ್ಯ ಮತ್ತು ಉದ್ಯೋಗದ ಕಾರ್ಯಾಗಾರ (WORKSHOP ON SKILLPLUS & JOB NEXT) ಕಾರ್ಯಗಾರ ಸಭೆಯನ್ನು ಜೊಲ್ಲೆ ಗ್ರೂಪ್ ಉಪಾಧ್ಯಕ್ಷರಾದ ಶ್ರೀ ಬಸವಪ್ರಸಾದ ಜೊಲ್ಲೆ ಯವರು ನಡೆಸಿ ಮಾತನಾಡುತ್ತಿರುವ ದೃಶ್ಯ.




ನಿಪ್ಪಾಣಿ ಕ್ಷೇತ್ರದ ಮಮದಾಪೂರ ಗ್ರಾಮದ ಶ್ರೀ ಅಂಬಿಕಾ ದೇವಸ್ಥಾನದ ಆವರಣದಲ್ಲಿ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಯವರು ಸ್ವಚ್ಛತಾ ಅಭಿಯಾನಕ್ಕೆ ಚಾಲನೆ ನೀಡಿದರು.




ಜೊಲ್ಲೆ ಗ್ರೂಪ್‌ನ ಅಂಗ ಸಂಸ್ಥೆಯಾದ ಮ್ಯಾಗ್ನಂ ಟಫ್ ಇಂಡಿಯಾ ಪ್ರೈವೇಟ್ ಲಿ., ನಾಯಿಂಗ್ಲಜ ಗಾಜು ಕಾರ್ಖಾನೆಯಲ್ಲಿ ಮಹಾನವಮಿ ಪ್ರಯುಕ್ತ ಶ್ರೀ ಬಸವಪ್ರಸಾದ ಜೊಲ್ಲೆ ಮತ್ತು ಸೌ ಯಶಸ್ವಿನಿ ಜೊಲ್ಲೆ ಯವರು ಸರಸ್ವತಿ, ಲಕ್ಷ್ಮೀ ಗಣೇಶ ಭಾವಚಿತ್ರಕ್ಕೆ ಪೂಜೆ ಸಲ್ಲಿಸುತ್ತಿರುವ ದೃಶ್ಯ.



**ಸತ್ಕಾರ**

ಸೊಲ್ಲಾಪುರ ಜಿಲ್ಲೆಯ ತುಳಜಾಪುರದ ಅಂಬಾಭವಾನಿ ಮಾತೆಯ ದರ್ಶನ ಪಡೆದು, ವಿಶೇಷ ಪೂಜೆ ಸಲ್ಲಿಸಿ, ನಂತರ ದೇವಸ್ಥಾನ ಕಮೀಟಿಯವರು ನೀಡಿದ ಸತ್ಕಾರವನ್ನು ಜೊಲ್ಲೆ ದಂಪತಿ ಸ್ವೀಕರಿಸುತ್ತಿರುವ ದೃಶ್ಯ.



**ಭೇಟಿ**

ಹಿರೇಕೊಡಿ ಗ್ರಾಮದ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಬೆಳಗಿನ ಉಪಹಾರ ಸೇವಿಸಿ ಅಸ್ವಸ್ಥಗೊಂಡಿದ್ದ ವಿದ್ಯಾರ್ಥಿಗಳನ್ನು ಚಿಕ್ಕೋಡಿ ಲೋಕಸಭೆಯ ಮಾಜಿ ಸಂಸದರಾದ ಶ್ರೀ ಅಣ್ಣಾಸಾಹೇಬ ಜೊಲ್ಲೆ ಯವರು ಭೇಟಿ ಮಾಡಿ, ಮಕ್ಕಳ ಆರೋಗ್ಯ ವಿಚಾರಿಸುತ್ತಿರುವುದು.



**ನೂತನ ಶಾಖೆ ಉದ್ಘಾಟನೆ**

ಕೊಲ್ಹಾಪುರದಲ್ಲಿ ಶ್ರೀ ಬೀರೇಶ್ವರ ಕೋ-ಆಪ್ ಕ್ರೆಡಿಟ್ ಸೋಸಾಯಿಟಿ ಲಿ., ಯಕ್ಸಂಬಾ (ಮಲ್ಟಿ-ಸ್ಟೇಟ್) 229ನೇ ನೂತನ ಶಾಖೆ-ಕೊಲ್ಹಾಪುರ ಇದರ ಉದ್ಘಾಟನೆ ಹಾಗೂ ಪೂಜಾ ಸಮಾರಂಭವನ್ನು ಕನ್ನೇರಿಯ ಪ.ಪೂಜ್ಯ.ಜಗದ್ಗುರು ಶ್ರೀ ಅದೃಶ್ಯ ಕಾಡಸಿದ್ದೇಶ್ವರ ಮಹಾಸ್ವಾಮೀಜಿಗಳ ದಿವ್ಯ ಸಾನಿಧ್ಯದಲ್ಲಿ, ಸಂಸ್ಥೆಯ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು, ಸ್ಥಳೀಯ ಮುಖಂಡರು ಹಾಗೂ ಆಶಾಜ್ಯೋತಿ ವಿಶೇಷ ಮಕ್ಕಳ ಶಾಲೆಯ ಅಧ್ಯಕ್ಷರಾದ ಶ್ರೀಜ್ಯೋತಿಪ್ರಸಾದ ಜೊಲ್ಲೆ ಯವರು ಉದ್ಘಾಟಿಸುತ್ತಿರುವ ದೃಶ್ಯ



**ಕೃಷಿ ಪ್ರದರ್ಶನ**

ಸಂಕೇಶ್ವರದ ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಜೊಲ್ಲೆ ಗ್ರೂಪ್ ಸಂಸ್ಥಾಪಕರಾದ ಶ್ರೀ ಅಣ್ಣಾಸಾಹೇಬ ಜೊಲ್ಲೆ ಯವರು ಮೊದಲ ಬಾರಿಗೆ 'ಕೃಷಿ ಪ್ರದರ್ಶನ' ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಕೃಷಿ ಮಳಿಗೆಯನ್ನು ಸಕ್ಕರೆ ಕಾರ್ಖಾನೆ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಉದ್ಘಾಟಿಸಿ, ಚಾಲನೆ ನೀಡಿದರು.



**ನೂತನ ಶಾಖೆ ಉದ್ಘಾಟನೆ**

ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿ ಪಟ್ಟಣದಲ್ಲಿ ಶ್ರೀ ಬೀರೇಶ್ವರ ಕೋ-ಆಪ್ ಕ್ರೆಡಿಟ್ ಸೋಸಾಯಿಟಿ ಲಿ.,ಯಕ್ಸಂಬಾ (ಮಲ್ಟಿ-ಸ್ಟೇಟ್) 230 ನೇ ನೂತನ ಶಾಖೆ-ದಾಂಡೇಲಿ ಇದರ ಉದ್ಘಾಟನೆ ಹಾಗೂ ಪೂಜಾ ಸಮಾರಂಭವನ್ನು ಗುರು ನಿತ್ಯಾನಂದ ಆಶ್ರಮ ಕಂಚಹಳ್ಳಿಯ ಪ.ಪೂ.ಶ್ರೀ ಬಾಬಾನಂದ ಸ್ವಾಮೀಜಿಗಳ ದಿವ್ಯ ಸಾನಿಧ್ಯದಲ್ಲಿ ಸ್ಥಳೀಯ ಮುಖಂಡರು, ಉದ್ಘಾಟಿಸುತ್ತಿರುವುದು.



**ಚಾಲನೆ**

ನಿಪ್ಪಾಣಿ ಮತಕ್ಷೇತ್ರದ ಮಾಂಗೂರ ಗ್ರಾಮದಲ್ಲಿ 2 ಕೋಟಿ ರೂ.ಮೊತ್ತದಲ್ಲಿ ಮಾಂಗೂರ ಗ್ರಾಮದಿಂದ ಬಾರವಾಡ ಗ್ರಾಮದವರೆಗೆ ರಸ್ತೆ ಸುಧಾರಣೆ ಕಾಮಗಾರಿಗೆ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಯವರು ಭೂಮಿ ಪೂಜೆ ನೆರವೇರಿಸಿ ಚಾಲನೆ ನೀಡುತ್ತಿರುವ ದೃಶ್ಯ.



**ಪಾಲಕರ ಸಭೆ**

ಬಸವಜ್ಯೋತಿ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಪದವಿ ಪೂರ್ವ ಕಾಲೇಜು ಯಕ್ಸಂಬಾ ಇದರ ಪಾಲಕರ ಸಭೆಯನ್ನು ಮಾಜಿ ಸಚಿವರು ಹಾಗೂ ನಿಪ್ಪಾಣಿ ಜನಪ್ರಿಯ ಶಾಸಕರಾದ ಸೌ.ಶಶಿಕಲಾ ಜೊಲ್ಲೆ ಸಸಿಗೆ ನೀರೆರೆಯುವ ಮೂಲಕ ಚಾಲನೆ ನೀಡುತ್ತಿರುವ ದೃಶ್ಯ



**ಧನಾದೇಶ ಪತ್ರ ವಿತರಣೆ**

ಬೇಡಕಿಹಾಳದಲ್ಲಿ ಮುಖ್ಯಮಂತ್ರಿ ಪರಿಹಾರ ನಿಧಿಯಿಂದ, ವೈದ್ಯಕೀಯ ಚಿಕಿತ್ಸೆಗೆ ಮಂಜೂರಾದ 4 ಫಲಾನುಭವಿಗಳಿಗೆ 55,800/- ರೂ.ಗಳ ಧನಾದೇಶ ಪತ್ರ ಮತ್ತು ವಿಧವಾ ವೇತನ, 8 ಹಿರಿಯ ನಾಗರಿಕರಿಗೆ ವೃದ್ಧಾಪ್ಯ ವೇತನ ಒಟ್ಟು 82,600/- ಮೊತ್ತದ ಪಿಂಚಣಿಯ ಆದೇಶ ಪತ್ರವನ್ನು ಮಾಜಿ ಸಚಿವರು ಹಾಗೂ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಯವರು ವಿತರಿಸಲಾಯಿತು.